## 2018 ಕ.ತೀ.ವ. 951

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್.ಜಿ. ರಮೇಶ್ ಮತ್ತು
### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಾನ್ ಮೈಕೆಲ್ ಕುನ್ಹಾ

### ಮೆ|| ಪ್ಯಾಟನ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ –ವಿರುದ್ಧ–
### ಮೆ|| ಲೊರ್ವೆನ್ ಪ್ರೊಜೆಕ್ಟ್ಸ ಲಿಮಿಟೆಡ್ ಮತ್ತು ಇನ್ನೊಬ್ಬರು*

**ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1966ರ 37(1)ನೇ ಪ್ರಕರಣದ ಮೇರೆಗಿನ ಸಂಕೀರ್ಣ ಮೊದಲ ಅಪೀಲು.**

**ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996ರ ('ಅಧಿನಿಯಮ') 9ನೇ ಮೂಲ ಪ್ರಕರಣದ ಮೇರೆಗೆ ಸಲ್ಲಿಸಲಾದ ಮಧ್ಯಸ್ಥಿಕೆ ಅರ್ಜಿ ಸಂಖ್ಯೆ: 850/2013ಕ್ಕೆ ಅವಕಾಶ ನೀಡಿ ಹೆಚ್ಚುವರಿ ನಗರ ಸಿವಿಲ್ ನ್ಯಾಯಾಧೀಶರು, ಬೆಂಗಳೂರು ಇವರ ನ್ಯಾಯಾಲಯವು ಹೊರಡಿಸಿದ ದಿನಾಂಕ: 21.12.2013ರ ಆದೇಶದ ವಿರುದ್ಧ ಈ ಅಪೀಲನ್ನು ಈ ಅಧಿನಿಯಮದ 37(1)(ಎ) ಪ್ರಕರಣದ ಮೇರೆಗೆ ಸಲ್ಲಿಸಲಾಗಿದೆ. ಪ್ರಶ್ನಿತ ಆದೇಶದ ಮೂಲಕ, ಮಧ್ಯಸ್ಥಿಕೆ ನ್ಯಾಯಾಧಿಕರಣದ ರಚನೆ ಮತ್ತು ಅದು ವ್ಯವಹರಣೆಗಳನ್ನು ಪ್ರಾರಂಭಿಸುವವರೆಗೆ, ದಿನಾಂಕ: 18.05.2011 (18.04.2011)ರ ತಿಳುವಳಿಕೆ ಪತ್ರದ ನಿಬಂಧನೆಗಳನ್ನು ಜಾರಿಗೊಳಿಸುವುದರಿಂದ ಅಪೀಲುದಾರನನ್ನು ನಿರ್ಬಂಧಿಸಲಾಗಿದೆ.**

**ಈ ಮೊಕದ್ದಮೆಯಲ್ಲಿ, ಅಧಿನಿಯಮದ 9ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಿದ ದಿನಾಂಕ: 13.11.2013ರಂದು ಸಲ್ಲಿಸಲಾಗಿದೆ. ವಿವಾದದ ಸಂಬಂಧದಲ್ಲಿನ ಮಧ್ಯಸ್ಥಿಕೆ ವ್ಯವಹರಣೆಗಳನ್ನು, ದಿನಾಂಕ: 13.11.2013ರಿಂದ ಎಂದರೆ, ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ**

* ಸಂಕೀರ್ಣ ಪ್ರಥಮ ಅಪೀಲು ಸಂಖ್ಯೆ: 1440/2014 (ಎಎ), ದಿನಾಂಕ: 13ನೇ ಜೂನ್, 2017.

**ಮೂರು ತಿಂಗಳುಗಳ ಒಳಗಾಗಿ ಪ್ರಾರಂಭಿಸಲಿಲ್ಲವೆಂದು ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ಹೇಳಿದ್ದಾರೆ. ಆದ್ದರಿಂದ, ನಮ್ಮ ಅಭಿಪ್ರಾಯದಲ್ಲಿ, ಈ ಅಪೀಲಿನಲ್ಲಿ ಪ್ರಶ್ನಿಸಲಾಗಿರುವ, ಮಧ್ಯಂತರ ಕ್ರಮವನ್ನು ಜಾರಿ ಮಾಡಿ ದಿನಾಂಕ: 21.12.2013ರಂದು ಹೊರಡಿಸಿದ ಆದೇಶವು, ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯು ಕೊನೆಗೊಂಡಿದ್ದರ ಮೇರೆಗೆ ಸ್ವಯಂ ಆಗಿ ರದ್ದುಗೊಳ್ಳುತ್ತದೆ. ಆದುದರಿಂದ, ಇದನ್ನು ತಳ್ಳಿಹಾಕಲು ಹೆಚ್ಚಿನ ಯಾವುದೇ ಆದೇಶವನ್ನು ಹೊರಡಿಸುವ ಅವಶ್ಯಕತೆ ಇಲ್ಲ.**

**ಮೇಲೆ ಹೇಳಲಾದಂತೆ, ಇದರಲ್ಲಿ ಪ್ರಶ್ನಿಸಲಾಗಿರುವ ಆದೇಶವು, ನಿಯಮಗಳ 9(4)ನೇ ನಿಯಮದ ದೃಷ್ಟಿಯಲ್ಲಿ, ಅಧಿನಿಯಮದ 9ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಿದ ದಿನಾಂಕವಾದ 13.11.2013ರಿಂದ ಮೂರು ತಿಂಗಳುಗಳ ಅವಧಿಯು ಮುಕ್ತಾಯವಾದ ನಂತರ ಸ್ವಯಂ ಆಗಿ ರದ್ದುಗೊಳ್ಳುತ್ತದೆ. ಆದ್ದರಿಂದ, ಅದನ್ನು ತಳ್ಳಿಹಾಕಲು ಹೆಚ್ಚಿನ ಆದೇಶವನ್ನು ಹೊರಡಿಸಬೇಕಾದ ಅವಶ್ಯಕತೆ ಇಲ್ಲ.**

**ಅಪೀಲನ್ನು ವಿಲೇ ಮಾಡಲಾಗಿದೆ.**

ಅರ್ಜಿದಾರರ ಪರ : ಶ್ರೀ ಅಜೇಶ್ ಕುಮಾರ್ ಎಸ್., ನ್ಯಾಯವಾದಿ;
ಪ್ರತ್ಯರ್ಜಿದಾರರ ಪರ : ಶ್ರೀ ಹೆಚ್. ಮಲ್ಲನಗೌಡ, ನ್ಯಾಯವಾದಿ,
– ಗೈರುಹಾಜರಾಗಿದ್ದಾರೆ.

## ತೀರ್ಪು

**ನ್ಯಾಯಮೂರ್ತಿ ಹೆಚ್.ಜಿ. ರಮೇಶ್ (ಮೌಖಿಕ)**

**1.** ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996ರ ('ಅಧಿನಿಯಮ') 9ನೇ ಮೂಲ ಪ್ರಕರಣದ ಮೇರೆಗೆ ಸಲ್ಲಿಸಲಾದ ಮಧ್ಯಸ್ಥಿಕೆ ಅರ್ಜಿ ಸಂಖ್ಯೆ:

850/2013ಕ್ಕೆ ಅವಕಾಶ ನೀಡಿ ಹೆಚ್ಚುವರಿ ನಗರ ಸಿವಿಲ್ ನ್ಯಾಯಾಧೀಶ, ಬೆಂಗಳೂರು ಇವರ ನ್ಯಾಯಾಲಯವು ಹೊರಡಿಸಿದ ದಿನಾಂಕ: 21.12.2013ರ ಆದೇಶದ ವಿರುದ್ಧ ಈ ಅಪೀಲನ್ನು ಈ ಅಧಿನಿಯಮದ 37(1)(ಎ) ಪ್ರಕರಣದ ಮೇರೆಗೆ ಸಲ್ಲಿಸಲಾಗಿದೆ. ಪ್ರಶ್ನಿತ ಆದೇಶದ ಮೂಲಕ, ಮಧ್ಯಸ್ಥಿಕೆ ನ್ಯಾಯಾಧಿಕರಣದ ರಚನೆ ಮತ್ತು ಅದು ವ್ಯವಹರಣೆಗಳನ್ನು ಪ್ರಾರಂಭಿಸುವವರೆಗೆ, ದಿನಾಂಕ: 18.05.2011 (18.04.2011)ರ ತಿಳುವಳಿಕೆ ಪತ್ರದ ನಿಬಂಧನೆಗಳನ್ನು ಜಾರಿಗೊಳಿಸುವುದರಿಂದ ಅಪೀಲುದಾರನನ್ನು ನಿರ್ಬಂಧಿಸಲಾಗಿದೆ.

**2.** ಅಪೀಲುದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳ ವಾದವನ್ನು ನಾವು ಆಲಿಸಿದೆವು ಮತ್ತು ಪ್ರಶ್ನಿತ ಆದೇಶವನ್ನು ಪರಿಶೀಲಿಸಿದೆವು. ಪ್ರತ್ಯರ್ಜಿದಾರರ ಪರ ನ್ಯಾಯವಾದಿಗಳು ಗೈರುಹಾಜರಾಗಿದ್ದಾರೆ. ಕರ್ನಾಟಕ ಉಚ್ಚ ನ್ಯಾಯಾಲಯ ಮಧ್ಯಸ್ಥಿಕೆ (ನ್ಯಾಯಾಲಯಗಳ ಮುಂದಿರುವ ವ್ಯವಹರಣೆಗಳು) ನಿಯಮಗಳು, 2001ರ ("ನಿಯಮಗಳು") 9(4)ನೇ ನಿಯಮದ ಅಭಿಪ್ರಾಯದಲ್ಲಿ, ಅಧಿನಿಯಮದ 9ನೇ ಪ್ರಕರಣದ ಮೇರೆಗೆ ಮಧ್ಯಂತರ ಕ್ರಮವನ್ನು ಜಾರಿ ಮಾಡಿ ಹೊರಡಿಸಿದ ದಿನಾಂಕ: 21.12.2013ರ ಪ್ರಶ್ನಿತ ಆದೇಶವನ್ನು, ಮೇಲೆ ಹೇಳಿದ ಮೂರು ತಿಂಗಳುಗಳ ಒಳಗಾಗಿ ಮಧ್ಯಸ್ಥಿಕೆ ವ್ಯವಹರಣೆಗಳನ್ನು ಪ್ರಾರಂಭಿಸಿಲ್ಲವಾದ್ದರಿಂದ, ಅಧಿನಿಯಮದ 9ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಮಂಡಿಸಿದ ದಿನಾಂಕದಿಂದ ಮೂರು ತಿಂಗಳುಗಳ ಅವಧಿ ಮುಕ್ತಾಯಗೊಂಡಿದ್ದರ ಆಧಾರದ ಮೇಲೆ ರದ್ದುಗೊಳಿಸಲಾಗಿದೆ. ಮಂಡಿಸಲಾದ ವಾದವನ್ನು ಪರಿಶೀಲಿಸಲು, ನಿಯಮಗಳ 9(4)ನೇ ನಿಯಮವನ್ನು ಗಮನಿಸಬೇಕಾಗುತ್ತದೆ; ಅದನ್ನು ಈ ಮುಂದಿನಂತೆ ಓದಲಾಗಿದೆ:

**ನಿಯಮ 9: ಮಧ್ಯಂತರ ಕ್ರಮಕ್ಕಾಗಿ ಅರ್ಜಿ ಸಲ್ಲಿಸುವುದು, ಇತ್ಯಾದಿ:**

**(4)** ಮಧ್ಯಸ್ಥಿಕೆ ವ್ಯವಹರಣೆಗಳನ್ನು ಪ್ರಾರಂಭಿಸುವ ಮುಂಚೆ ಮಧ್ಯಂತರ ಕ್ರಮಕ್ಕಾಗಿ ಅರ್ಜಿಯನ್ನು ಸಲ್ಲಿಸಿದ ಸಂದರ್ಭದಲ್ಲಿ, 9ನೇ ಪ್ರಕರಣದ ಮೇರೆಗೆ ಅರ್ಜಿಯನ್ನು

> ಸಲ್ಲಿಸಿದ ದಿನಾಂಕದಿಂದ ಮೂರು ತಿಂಗಳುಗಳ ಒಳಗಾಗಿ ಮಧ್ಯಂತರ ವ್ಯವಹರಣೆಗಳನ್ನು ಪ್ರಾರಂಭಿಸದಿದ್ದರೆ, ಹಾಗೆ ಹೊರಡಿಸಲಾದ ಯಾವುದೇ ಮಧ್ಯಂತರ ಆದೇಶವು, ಆ ಪರಿಣಾಮಕ್ಕೆ ನ್ಯಾಯಾಲಯವು ಹೊರಡಿಸಬೇಕಾದ ಯಾವುದೇ ನಿರ್ದಿಷ್ಟ ಆದೇಶವಿಲ್ಲದೆ ರದ್ದುಗೊಳ್ಳತಕ್ಕದ್ದು.

ಮೇಲಿನ ಉದ್ಧೃತ ಉಪ–ನಿಯಮವು, ಮಧ್ಯಸ್ಥಿಕೆ ವ್ಯವಹರಣೆಗಳನ್ನು ಪ್ರಾರಂಭಿಸುವ ಮುಂಚೆ ಯಾವುದೇ ಮಧ್ಯಸ್ಥಿಕೆ ಕ್ರಮಕ್ಕಾಗಿ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ, ವಿವಾದದ ಸಂಬಂಧದಲ್ಲಿನ ಮಧ್ಯಸ್ಥಿಕೆ ವ್ಯವಹರಣೆಗಳನ್ನು ಅಧಿನಿಯಮದ 9ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಮೂರು ತಿಂಗಳುಗಳ ಒಳಗಾಗಿ ಪ್ರಾರಂಭಿಸದಿದ್ದರೆ, ನೀಡಲಾದ ಯಾವುದೇ ಮಧ್ಯಂತರ ಆದೇಶವು, ಆ ಆದೇಶವನ್ನು ಹೊರಡಿಸಿದ ನ್ಯಾಯಾಲಯವು, ಆ ಪರಿಣಾಮಕ್ಕೆ ಯಾವುದೇ ನಿರ್ದಿಷ್ಟ ಆದೇಶವನ್ನು ಹೊರಡಿಸದೆ ರದ್ದುಗೊಳ್ಳತಕ್ಕದ್ದು ಎಂದು ಹೇಳುತ್ತದೆ. ಈ ಸಂದರ್ಭದಲ್ಲಿ, ಮೇಲೆ ಉದ್ಧರಿಸಿದ 9(4)ನೇ ನಿಯಮದಲ್ಲಿ ಉಲ್ಲೇಖಿಸಿದ 'ಯಾವುದೇ ಮಧ್ಯಂತರ ಆದೇಶ'ವು ಯಾವುದೇ ಮಧ್ಯಂತರ ಕ್ರಮವನ್ನು ಜಾರಿ ಮಾಡಿ ಹೊರಡಿಸಿದ ಯಾವುದೇ ಆದೇಶವನ್ನು ಒಳಗೊಳ್ಳುತ್ತದೆ ಎಂದು ಹೇಳುವುದು ಸುಸಂಗತವಾಗಿದೆ.

**3.** ಈ ಮೊಕದ್ದಮೆಯಲ್ಲಿ, ಅಧಿನಿಯಮದ 9ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಿದ ದಿನಾಂಕ: 13.11.2013ರಂದು ಸಲ್ಲಿಸಲಾಗಿದೆ. ವಿವಾದದ ಸಂಬಂಧದಲ್ಲಿನ ಮಧ್ಯಸ್ಥಿಕೆ ವ್ಯವಹರಣೆಗಳನ್ನು, ದಿನಾಂಕ: 13.11.2013ರಿಂದ ಎಂದರೆ, ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಮೂರು ತಿಂಗಳುಗಳ ಒಳಗಾಗಿ ಪ್ರಾರಂಭಿಸಲಿಲ್ಲವೆಂದು ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ಹೇಳಿದ್ದಾರೆ. ಆದ್ದರಿಂದ, ನಮ್ಮ ಅಭಿಪ್ರಾಯದಲ್ಲಿ, ಈ ಅಪೀಲಿನಲ್ಲಿ ಪ್ರಶ್ನಿಸಲಾಗಿರುವ, ಮಧ್ಯಂತರ ಕ್ರಮವನ್ನು ಜಾರಿ ಮಾಡಿ ದಿನಾಂಕ: 21.12.2013ರಂದು ಹೊರಡಿಸಿದ ಆದೇಶವು, ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯು ಕೊನೆಗೊಂಡಿದ್ದರ ಮೇರೆಗೆ ಸ್ವಯಂ ಆಗಿ ರದ್ದುಗೊಳ್ಳುತ್ತದೆ. ಆದುದರಿಂದ, ಇದನ್ನು ತಳ್ಳಿಹಾಕಲು ಹೆಚ್ಚಿನ ಯಾವುದೇ ಆದೇಶವನ್ನು ಹೊರಡಿಸುವ ಅವಶ್ಯಕತೆ ಇಲ್ಲ.

**4.** ಎತ್ತಲಾದ ಪ್ರಶ್ನೆಯ ಸಂದರ್ಭದಲ್ಲಿ, ದಿನಾಂಕ: 23.10.2015ರಂದು ಜಾರಿಗೆ ಬಂದಿರುವ ಮಧ್ಯಸ್ಥಿಕೆ ಮತ್ತು ಸಂಧಾನ (ತಿದ್ದುಪಡಿ) ಅಧಿನಿಯಮ, 2015ರ ಮೂಲಕ ಸಂಸತ್ತು, ಅಧಿನಿಯಮದ 9ನೇ ಪ್ರಕರಣಕ್ಕೆ ಮಾಡಿದ ಇತ್ತೀಚಿನ ತಿದ್ದುಪಡಿಯನ್ನು ಉಲ್ಲೇಖಿಸುವುದು ಸೂಕ್ತ. ಮೇಲೆ ಉದ್ಧರಿಸಿದ ನಿಯಮಕ್ಕೆ ಹೋಲಿಕೆಯಾಗುವ (2)ನೇ ಉಪ–ಪ್ರಕರಣವನ್ನು ಮೇಲೆ ಹೇಳಿದ ತಿದ್ದುಪಡಿ ಅಧಿನಿಯಮದ ಮೂಲಕ 9ನೇ ಪ್ರಕರಣಕ್ಕೆ ಸೇರಿಸಲಾಗಿದೆ; ಸದರಿ ಉಪ–ಪ್ರಕರಣವನ್ನು ಈ ಮುಂದಿನಂತೆ ಓದಲಾಗಿದೆ:

> **ಪ್ರಕರಣ 9: ನ್ಯಾಯಾಲಯದಿಂದ ಮಧ್ಯಂತರ ಕ್ರಮಗಳು, ಇತ್ಯಾದಿ:**
>
> **(2)** ಮಧ್ಯಸ್ಥಿಕೆ ವ್ಯವಹರಣೆಗಳನ್ನು ಪ್ರಾರಂಭಿಸುವ ಮೊದಲು, (1)ನೇ ಉಪ–ಪ್ರಕರಣದ ಮೇರೆಗೆ ಯಾವುದೇ ಮಧ್ಯಂತರ ರಕ್ಷಣಾ ಕ್ರಮದ ಸಂಬಂಧದಲ್ಲಿ ನ್ಯಾಯಾಲಯವು ಆದೇಶವನ್ನು ಹೊರಡಿಸಿದ್ದಲ್ಲಿ, ಅಂಥ ಆದೇಶವನ್ನು ಹೊರಡಿಸಿದ ದಿನಾಂಕದಿಂದ ತೊಂಭತ್ತು ದಿನಗಳ ಅವಧಿಯೊಳಗೆ ಅಥವಾ ನ್ಯಾಯಾಲಯವು ನಿರ್ಧರಿಸಬಹುದಾದ ಅಂಥ ಹೆಚ್ಚಿನ ಕಾಲಾವಧಿಯೊಳಗೆ ಮಧ್ಯಸ್ಥಿಕೆ ವ್ಯವಹರಣೆಗಳನ್ನು **ಪ್ರಾರಂಭಿಸತಕ್ಕದ್ದು.**
>
> (ಒತ್ತು ನೀಡಲಾಗಿದೆ)

ಮೇಲಿನ ಉಪ–ಪ್ರಕರಣದ ಪ್ರಕಾರ, ಮಧ್ಯಸ್ಥಿಕೆ ವ್ಯವಹರಣೆಗಳನ್ನು ಪ್ರಾರಂಭಿಸುವ ಮೊದಲು ನ್ಯಾಯಾಲಯವು, ಅಧಿನಿಯಮದ 9(1)ನೇ ಪ್ರಕರಣದ ಮೇರೆಗೆ ಯಾವುದೇ ಕ್ರಮದ ಸಂಬಂಧದಲ್ಲಿ ಆದೇಶವನ್ನು ಹೊರಡಿಸಿದ್ದಲ್ಲಿ, ಉಪ–ಪ್ರಕರಣದಲ್ಲಿ ಹೇಳಿದ ಅವಧಿಯೊಳಗೆ ಮಧ್ಯಸ್ಥಿಕೆ ವ್ಯವಹರಣೆಗಳನ್ನು ಪ್ರಾರಂಭಿಸತಕ್ಕದ್ದು. ಅಧಿನಿಯಮದ 9(2)ನೇ ಪ್ರಕರಣದಲ್ಲಿ ಹೇಳಿದ ಅವಧಿಯೊಳಗೆ ಮಧ್ಯಸ್ಥಿಕೆ ವ್ಯವಹರಣೆಗಳನ್ನು ಪ್ರಾರಂಭಿಸುವುದನ್ನು ಸಂಸತ್ತಿನ ಮೂಲಕ ಕಡ್ಡಾಯಗೊಳಿಸಲಾಗಿದೆ.

(2)ನೇ ಉಪ–ಪ್ರಕರಣದಲ್ಲಿ ಹೇಳಲಾದ ಅವಧಿಯೊಳಗೆ ಮಧ್ಯಸ್ಥಿಕೆ ವ್ಯವಹರಣೆಗಳು ಕಡ್ಡಾಯವಾಗಿ ಪ್ರಾರಂಭವಾಗುವಂತೆ ಮಾಡುವಲ್ಲಿ ಸಂಸತ್ತಿಗೆ ಇರುವ ಉದ್ದೇಶವು, ಮಧ್ಯಸ್ಥಿಕೆ ವ್ಯವಹರಣೆಗಳು ನಡೆಯದಿರುವ ಸಂದರ್ಭದಲ್ಲಿ, 9(1)ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಯಾವುದೇ ಮಧ್ಯಂತರ ಕ್ರಮಕ್ಕೆ ಸಂಬಂಧಿಸಿದ ಆದೇಶವನ್ನು ಅನಿರ್ದಿಷ್ಟ ಕಾಲದವರೆಗೆ ಜಾರಿಯಲ್ಲಿ ಮುಂದುವರಿಸದಿರುವಂತೆ ನೋಡಿಕೊಳ್ಳುವುದಾಗಿದೆ. ಆದುದರಿಂದ, (2)ನೇ ಉಪ–ಪ್ರಕರಣದಲ್ಲಿ ಹೇಳಲಾದ ಅವಧಿಯೊಳಗೆ ಮಧ್ಯಸ್ಥಿಕೆ ವ್ಯವಹರಣೆಗಳನ್ನು ಪ್ರಾರಂಭಿಸುವುದು, ಅಧಿನಿಯಮದ 9(1)ನೇ ಪ್ರಕರಣದ ಮೇರೆಗೆ ಯಾವುದೇ ಮಧ್ಯಸ್ಥಿಕೆ ಕ್ರಮದ ಸಂಬಂಧದಲ್ಲಿ ಆದೇಶವನ್ನು ಹೊರಡಿಸುವ ಕಾನೂನಿನ ಪರಿಣಾಮಕಾರಿತ್ವಕ್ಕೆ ಅಗತ್ಯವಾದುದಾಗಿದೆ. ಆದ್ದರಿಂದ, ಅಧಿನಿಯಮದ 9(2)ನೇ ಪ್ರಕರಣದಲ್ಲಿ ಹೇಳಲಾದ ಅವಧಿಯೊಳಗೆ ವಿವಾದದ ಸಂಬಂಧದಲ್ಲಿನ ಮಧ್ಯಸ್ಥಿಕೆ ವ್ಯವಹರಣೆಗಳನ್ನು ಪ್ರಾರಂಭಿಸದೆ ಇದ್ದರೆ, ಅಧಿನಿಯಮದ 9(1)ನೇ ಪ್ರಕರಣದ ಮೇರೆಗೆ ಯಾವುದೇ ಮಧ್ಯಸ್ಥಿಕೆ ಕ್ರಮದ ಸಂಬಂಧದಲ್ಲಿ ಹೊರಡಿಸಿರುವ ಆದೇಶವು, ಸದರಿ ಅವಧಿಯು ಕೊನೆಗೊಂಡ ನಂತರ ಸ್ವಯಂ ಆಗಿ ರದ್ದುಗೊಳ್ಳತಕ್ಕದ್ದು. ಇದನ್ನು ಸದರಿ ಉಪ–ಪ್ರಕರಣದಲ್ಲಿ ವ್ಯಕ್ತವಾಗಿ ಹೇಳದೇ ಇದ್ದಾಗ್ಯೂ, ಉಪ–ಪ್ರಕರಣದ ಕಡ್ಡಾಯ ಉದ್ದೇಶದಲ್ಲಿ ಇದು ಸ್ಪಷ್ಟವಾಗಿ ವ್ಯಕ್ತಗೊಳ್ಳುತ್ತದೆ. (2)ನೇ ಉಪ–ಪ್ರಕರಣದ ಯಾವುದೇ ಇತರ ಅರ್ಥವಿವರಣೆಯು, ಈ ಕಡ್ಡಾಯ ಉಪ–ಪ್ರಕರಣದಲ್ಲಿ ಹೇಳಲಾದ ಅವಧಿಯೊಳಗೆ ಮಧ್ಯಸ್ಥಿಕೆ ವ್ಯವಹರಣೆಗಳನ್ನು ಪ್ರಾರಂಭಿಸುವಲ್ಲಿ ಸಂಸತ್ತಿಗೆ ಇರುವ ಉದ್ದೇಶವನ್ನು ನಿರರ್ಥಕಗೊಳಿಸುತ್ತದೆ

**5.** ಮೇಲೆ ಹೇಳಲಾದಂತೆ, ಇದರಲ್ಲಿ ಪ್ರಶ್ನಿಸಲಾಗಿರುವ ಆದೇಶವು, ನಿಯಮಗಳ 9(4)ನೇ ನಿಯಮದ ದೃಷ್ಟಿಯಲ್ಲಿ, ಅಧಿನಿಯಮದ 9ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಿದ ದಿನಾಂಕವಾದ 13.11.2013ರಿಂದ ಮೂರು ತಿಂಗಳುಗಳ ಅವಧಿಯು ಮುಕ್ತಾಯವಾದ ನಂತರ ಸ್ವಯಂ ಆಗಿ ರದ್ದುಗೊಳ್ಳುತ್ತದೆ. ಆದ್ದರಿಂದ, ಅದನ್ನು ತಳ್ಳಿಹಾಕಲು ಹೆಚ್ಚಿನ ಆದೇಶವನ್ನು ಹೊರಡಿಸಬೇಕಾದ ಅವಶ್ಯಕತೆ ಇಲ್ಲ.

ಅಪೀಲನ್ನು ವಿಲೇ ಮಾಡಲಾಗಿದೆ.

---